RSI -2020 Question Paper-1

# Question Paper-1

3508220

**Maximum Marks : 50**
**ಗರಿಷ್ಠ ಅಂಕಗಳು : 50**

**Time : 90 Minutes**
**ಸಮಯ : 90 ನಿಮಿಷಗಳು**

**I. Write an essay in not more than 600 words on any one of the following topics : 20**

**ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

(a) Internet and Women Safety.

ಅಂತರ್ಜಾಲ ಮತ್ತು ಮಹಿಳಾ ಸುರಕ್ಷಿತತೆ.

(b) India and multiculture (plural culture)

ಭಾರತ ಮತ್ತು ಬಹುಸಂಸ್ಕೃತಿ.

(c) Sustainable economic development and environment.

ಸುಸ್ಥಿರ ಆರ್ಥಿಕ ಅಭಿವೃದ್ಧಿ ಮತ್ತು ಪರಿಸರ.

(d) Relevance of Co-alition governments.

ಸಮ್ಮಿಶ್ರ ಸರಕಾರಗಳ ಪ್ರಸ್ತುತತೆ.

(e) Regionalism, Nationalism and Constitution.

ಪ್ರಾದೇಶಿಕತೆ, ರಾಷ್ಟ್ರೀಯತೆ ಮತ್ತು ಸಂವಿಧಾನ.



www.kpscjobs.com

Scanned by CamScanner

**II. Translate the following paragraph from Kannada to English :** **10**

**ಈ ಕೆಳಕಂಡ ಪ್ಯಾರಾವನ್ನು ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಅನುವಾದಿಸಿ.**

ಚುನಾವಣೆಗಳಲ್ಲಿ ಹೆಚ್ಚಿನ ಸಂಖ್ಯೆಯ ಯುವಜನರು ಮತ ಚಲಾಯಿಸುವುದಿಲ್ಲ ಎನ್ನುವುದರಲ್ಲಿ ಹೊಸತೇನೂ ಇಲ್ಲ. ಆದರೆ ಯಾವ ಕಾರಣಕ್ಕಾಗಿ ಯುವಕರು ಚುನಾವಣೆಯಲ್ಲಿ ತಮ್ಮ ಪ್ರಜಾ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಆಸಕ್ತಿ ತೋರಿಸುವುದಿಲ್ಲ ಎನ್ನುವ ಪ್ರಶ್ನೆಗೆ ಅನೇಕ ರೀತಿಯ ಉತ್ತರಗಳು ಕೇಳಿ ಬರುತ್ತವೆ. ನಮ್ಮ ಮತಕ್ಕೆ ಹೆಚ್ಚು ಬೆಲೆ ಇಲ್ಲ, ಸಾಮಾನ್ಯ ಸಮಸ್ಯೆಗಳನ್ನು ಸಹ ಚುನಾಯಿತ ಸರ್ಕಾರಗಳು ಬಗೆಹರಿಸುವುದಿಲ್ಲ, ಮತದಾನ ಮಾಡುವುದಕ್ಕೆ ಬೇಜಾರು, ಒಳ್ಳೆಯ ಪಕ್ಷ ಅಥವಾ ಅಭ್ಯರ್ಥಿಗಳಿಲ್ಲ, ಬುದ್ಧಿವಂತರು ಹೊಣೆಗಾರಿಕೆ ಇರುವವರು ರಾಜಕೀಯ ಪ್ರವೇಶಿಸುವುದಿಲ್ಲ, ತತ್ವ ಸಿದ್ಧಾಂತ ಮತ್ತು ಉತ್ತಮ ನಾಯಕತ್ವದ ಗುಣ ಇರುವವರು ರಾಜಕೀಯದಲ್ಲಿ ಇಲ್ಲ. ರಾಜಕಾರಣಿಗಳು ಸ್ವಾರ್ಥಿಗಳು ಎಂಬುವಂತಹ ವಿವರಣೆಗಳು ಸಾಮಾನ್ಯವಾಗಿ ಎಲ್ಲೆಡೆ ಕೇಳಿ ಬರುತ್ತದೆ. ಈ ಮಾದರಿಯ ವಿವೇಚನೆಗಳು ಯುವ ಮತದಾರರ ಮನಸ್ಸನ್ನು ಹೊಕ್ಕಿರುವುದಕ್ಕೆ ಪ್ರಮುಖ ಕಾರಣ ರಾಜಕೀಯದ ಬಗ್ಗೆ ಯುವ ಜನರಲ್ಲಿ ಮೂಡಿರುವ ಅಥವಾ ಮೂಡದಿರುವ ಪ್ರಜ್ಞೆ ಎನ್ನಬೇಕಾಗುತ್ತದೆ. ಈ ಪ್ರಜ್ಞೆಯನ್ನು ಮೂಡಿಸಬೇಕಾಗಿರುವವರು ಮನೆಯ ಹಿರಿಯರು, ಮನೆಯ ಆಸುಪಾಸಿನವರು, ರಾಜಕೀಯ ಪಕ್ಷಗಳು ಹಾಗೂ ಮಾಧ್ಯಮದವರು ಆಗಿರುತ್ತಾರೆ.

**III. Translate the following gist from English to Kannada :** **10**

**ಈ ಕೆಳಕಂಡ ಖಂಡಿಕೆಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ.**

India is a country with its own history of Cultural, Ethical and Geographical diversity. India as a nation is respected all across the world because of its rich heritage in all aspects of civilization.

India is leading its way since time immemorial as a torch bearer of invention in the fields of Mathematics, Astronomy, Philosophy, Ayurveda and what not. From being a self-sufficient economy to be a colony of British and other European countries India has seen all phases of its social, political and economic evolution.

Because of the contributions of the Social reformers, Freedom fighters, Philosophers, Political leaders, Scientists, Teachers, Rulers and so on India is now heading towards becoming a Global leader and a Global super power.



www.kpscjobs.com

Scanned by CamScanner

IV. **Write a summary (précis) of the Kannada passage given below by reducing to 1/3 of the size and provide a suitable title.** **10**

ಈ ಕೆಳಗಿನ ಕನ್ನಡ ಲೇಖನವನ್ನು ಗಾತ್ರದಲ್ಲಿ 1/3 ರಷ್ಟಕ್ಕೆ ಇಳಿಸಿ ಸಾರಾಂಶವನ್ನು ಬರೆಯಿರಿ ಮತ್ತು ಅದಕ್ಕೊಂದು ಶೀರ್ಷಿಕೆಯನ್ನು ಕೊಡಿ.

ಯಾವುದೇ ಆಂದೋಲನದಲ್ಲಿ ನಾಯಕತ್ವ ಎಂಬುದು ನಿರ್ಣಾಯಕ ಅಂಶ. ಇದು ಆಂದೋಲನದ ತೀವ್ರತೆಯನ್ನು ಮತ್ತು ದಿಕ್ಕನ್ನು ಪ್ರಭಾವಿತಗೊಳಿಸುತ್ತದೆ. ಅಂತೆಯೇ ಯುವ ನಾಯಕ ನಿರ್ವಹಿಸಿದ ಕರ್ತವ್ಯಗಳು ಆಂದೋಲನದ ಮೇಲೆ ನೇರ ಪ್ರಭಾವವನ್ನು ಬೀರಿ ಯಾವ ದಾರಿಯನ್ನು ಹಿಡಿಯುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯುವ ನಾಯಕನಾದವನು ತನ್ನ ಗುಂಪಿನ ಸದಸ್ಯರೊಡನೆ ಪ್ರತಿಕ್ರಿಯಾತ್ಮಕ ನಂಬಿಕೆಯ ಗಮನಪೂರ್ಣ ಸಂಬಂಧವನ್ನು ಬೆಳೆಸಿಕೊಳ್ಳಬೇಕು. ಅವರ ಭಾವನೆಗಳನ್ನು ಗ್ರಹಿಸಿ ಅವರ ಅಭಿಪ್ರಾಯಗಳನ್ನು ಪ್ರತಿನಿಧಿಸಬೇಕು. ಭಾವೋದ್ರೇಕಗಳಿಲ್ಲದೆ ಸದಸ್ಯರ ಸಮಸ್ಯೆಗಳನ್ನು ಮತ್ತು ಅವರ ಅಳಲನ್ನು ನಿವೇದಿಸಿಕೊಳ್ಳುವ ಮೂಲಕ ತನ್ನ ಗುಂಪಿನ ಸದಸ್ಯರೊಡನೆ ಭಾವನಾತ್ಮಕ ಹೊಂದಾಣಿಕೆಯನ್ನು ಆತ ಮಾಡಬೇಕು.

ಒಂದು ಗುರಿಯಿಂದ ಮತ್ತೊಂದು ನೇರ ಕ್ರಿಯೆಗೆ ಅವರನ್ನು ನಾಯಕ ಪ್ರೇರೇಪಿಸಬೇಕು. ಯುವ ನಾಯಕ ಗುರಿ ಸಾಧನೆಗೆ ಕಾರ್ಯ ವಿಧಾನಗಳನ್ನು ಸೂಚಿಸಬೇಕು. ಇವುಗಳು ತರಗತಿಗಳನ್ನು ಬಹಿಷ್ಕರಿಸುವ, ಮುಷ್ಕರ ಹೂಡುವ, ಘೇರಾವ್ ಮಾಡುವ, ರಸ್ತೆ ತಡೆ ಉಂಟು ಮಾಡುವ, ಪ್ರದರ್ಶನ ನಡೆಸುವ ಇತ್ಯಾದಿ ಪ್ರಕಾರಗಳಾಗಿವೆ.

ಇದರಿಂದ ಕಾನೂನಾತ್ಮಕ ಸಮಸ್ಯೆಗಳಾದರೂ ಕೂಡ, ಪ್ರಕರಣಗಳು ದಾಖಲಾದಾಗ, ದಸ್ತಗಿರಿಯಾದಾಗ ಹಾಗೂ ಹೋರಾಟಗಳಲ್ಲಿ ಹಿನ್ನಡೆ ಉಂಟಾದಾಗ ಯಾವುದೇ ಹಿಂಜರಿತನಕ್ಕೆ ಒಳಗಾಗದೇ ತಮ್ಮ ನಾಯಕತ್ವ ಗುಣದಿಂದ ಎಲ್ಲರನ್ನೂ ನಿರ್ದಿಷ್ಟ ಗುರಿಯೆಡೆಗೆ ಒಟ್ಟಿಗೆ ಕರೆದುಕೊಂಡು ಹೋಗುವ ಶಕ್ತಿಯನ್ನು, ಕಲೆಯನ್ನು ರೂಢಿಸಿಕೊಂಡಾಗ ಮಾತ್ರ ಯಾವುದೇ ಒಬ್ಬ ವ್ಯಕ್ತಿ ಯುವ ನಾಯಕನಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

www.kpscjobs.com

Scanned by CamScanner